ಅಧ್ಯಕ್ಷರು :- ಸುಂದರ್‌ರಾಯರು ಹೇಗೆ ಎಂದರೆ ಅವರಿಗೆ ಬ್ರೆಡ್ ಇಲ್ಲದೇ ಇದ್ದರೂ ಪರವಾಗಿಲ್ಲ ಬೆಡ್ ಚೆನ್ನಾಗಿ ಇರಬೇಕು.

ಡಾ : ಹೆಚ್. ಸಿ. ಮಹದೇವಪ್ಪ :- ಸನ್ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಆರೋಗ್ಯ ಕೇಂದ್ರ ಇಂಡಸ್ಟ್ರೀಯಲ್ ರೀ-ಹ್ಯಾಬಿಲಿಟೇಶನ್ ಏರಿಯಾದಲ್ಲಿ ಇದೆ ನಾವು ಇನ್ ಫೇಶಂಟ್ಸ್ ಇದ್ದಲ್ಲಿ ಹಾಸಿಗೆಗಳನ್ನು ಒದಗಿಸಿಲ್ಲ. ಆದರೆ ನಾನು ಈ ಸಾರಿ ಸ್ವಲ್ಪ ಹಾಸಿಗೆಗಳನ್ನು ಕೊಡಲಿಕ್ಕೆ ಕ್ರಮ ಕೈಗೊಳ್ಳುತ್ತೇನೆ. ಆದರೆ ಪಂಚಾಯತ್‌ನವರು ನಲ್ಲಿ ಹಾಕಿಸಿ ಕ್ರಮ ಕೈಗೊಂಡು ನೀರನ್ನು ಕೊಟ್ಟಿದ್ದಾರೆ. ಜಿಲ್ಲಾ ಪರಿಷತ್‌ನಲ್ಲಿ ನಾನು ಕೂಡ ನಿಮ್ಮ ಪರವಾಗಿ ಕೇಳಿ ಅಲ್ಲಿ ಬೋರ್‌ವೆಲ್ ಹಾಕಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕುಂಬೆ ಸುಂದರ್‌ರಾವ್ :- ಆಲ್ಲಿ ರೋಗಿಗಳು ಬಂದರೆ ಎಲ್ಲಿ ಮಲಗಬೇಕು? ಆಲ್ಲಿ ಡಾಕ್ಟರ್ ಇಲ್ಲ, ವಾರಕ್ಕೆ ಎರಡು ಸಾರಿ ಡಾಕ್ಟರ್ ಬರುತ್ತಾರೆ. ಅದು ನಿರ್ವಸತಿ ಪ್ರದೇಶ. ಪಣಂಬೂರಿನ ಹಾರ್ಬರ್‌ಗೆ ಜಾಗಬಿಟ್ಟು ಕೊಟ್ಟು ಅವರಿಗೆ ಒಂದು...

ಅಧ್ಯಕ್ಷರು :- ನಮಗೆಲ್ಲಾ ಗೊತ್ತುಂಟು ಮಹಾರಾಯರೇ, ಅವರು ಬಿಡ್ಡಿಗೆ ಸೂಕ್ತ ವ್ಯವಸ್ಥೆಮಾಡಲಿದ್ದಾರೆ. ತಮಗೆ ಆತಂಕ ಬೇಡ.

ವಿಷಯ :- 1996-97 ನೇ ಸಾಲಿನಲ್ಲಿ ಪ್ರಾರಂಭವಾದ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 269 (858)

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಮತ್ತು ಎಷ್ಟು ಪದವಿ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಇದರಲ್ಲಿ ಇದುವರೆಗೂ ಎಷ್ಟ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) 1996-97 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 200 ಸರ್ಕಾರಿ ಪ್ರೌಢಶಾಲೆ ಗಳನ್ನು ಮತ್ತು 50 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ.

ಆ) ಅದರಂತೆ 200 ಸರ್ಕಾರಿ ಪ್ರೌಢಶಾಲೆಗಳನ್ನು ಮತ್ತು 50 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ.

ಶ್ರೀ ಎಸ್. ಯೋಗೀಶ್ ಭಟ್ :- ಮಾನ್ಯ ಅಧ್ಯಕ್ಷರೇ, ಹೊಸ ಪ್ರೌಢಶಾಲೆ ಮತ್ತು ಕಾಲೇಜನ್ನು ಕೊಡುವಾಗ ಶಾಲಾ ಶೈಕ್ಷಣಿಕ ಸಮಿತಿಗಳು ಯಾವುದನ್ನು ಕೇಳಿದ್ದಾರೆ ಅದನ್ನು ಕೊಡದೇ ಇರುವುದು ನಿಮ್ಮ ಗಮನಕ್ಕೆ ಬಂದಿದೆಯೆ? ಉದಾಹರಣೆಗೆ ಸೈನ್ಸ್ ವಿಭಾಗ ಮತ್ತು ಕಾಮರ್ಸ್ ವಿಭಾಗ ಕೇಳಿದಾಗ ಕೇವಲ ಕಲಾ ವಿಭಾಗ ಮಾತ್ರ ಕೊಟ್ಟಿದ್ದು ನಿಮ್ಮ ಗಮನಕ್ಕೆ ಬಂದಿದೆಯೆ? ಉದಾಹರಣೆಗೆ ಹೇಳುವುದಾದರೆ ಮಂಗಳೂರಿನ ಬೊಕ್ಕಪಟ್ಟಣದ ಪ್ರೌಢಶಾಲೆಯನ್ನು ಅಪ್ ಗ್ರೇಡ್ ಮಾಡಿದ್ದಾರೆ. ಅವರು ಕೇಳಿದ್ದುದು ಸೈನ್ಸ್ ಮತ್ತು ಕಾಮರ್ಸ್ ಆದರೆ ಕೊಟ್ಟಿದ್ದು ಆರ್ಟ್ಸ್. ಈ ರೀತಿ ಇದ್ದು ವಿದ್ಯಾರ್ಥಿಗಳು ಸೇರ್ಪಡೆ ಆಗದೇ ಇರುವಂಥ ತೊಂದರೆಗಳಿಂದ ಅನೇಕ ಕಾಲೇಜ್‌ಗಳು ಮುಚ್ಚುವುದಕ್ಕೆ ಒಂದು ಕಾರಣವಾಗಿದೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಸನ್ಮಾನ್ಯ ಸಭಾಧ್ಯಕ್ಷರೆ, ಸಾಮಾನ್ಯವಾಗಿ ಹೆಚ್ಚು ಬೇಡಿಕೆ ಇರತಕ್ಕಂಥದ್ದು ಆರ್ಟ್ಸ್ ಮತ್ತು ಕಾಮರ್ಸ್‌ಗೆ. ಒಂದು ವೇಳೆ ಸೈನ್ಸ್ ಕೇಳಿದರೂ ಸಹ ಕೊಟ್ಟಿಲ್ಲ ಎಂದೇನಿಲ್ಲ. ಜನರ ಬೇಡಿಕೆ ಹೆಚ್ಚಾಗಿ ಆರ್ಟ್ಸ್ ಮತ್ತು ಕಾಮರ್ಸ್‌ಗೆ ಇದೆ ಅದನ್ನು ನಾವು ಮಾಡಿದ್ದೇವೆ. ಅದರ ಬಗ್ಗೆ ತಮಗೆ ಉತ್ತರವನ್ನು ಒದಗಿಸಿದ್ದೇವೆ. 200 ಸರ್ಕಾರಿ ಪ್ರೌಢಶಾಲೆಗಳನ್ನು ಮತ್ತು 50 ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಕೊಟ್ಟಿದ್ದೇವೆ. ಪದವಿಪೂರ್ವ ಕಾಲೇಜಿನ ಪಟ್ಟಿಯಲ್ಲಿ ಬಂದಿರತಕ್ಕಂಥದ್ದು ಹೆಚ್ಚು ಆರ್ಟ್ಸ್ ಮತ್ತು ಕಾಮರ್ಸ್. ಮಾನ್ಯ ಸ್ನೇಹಿತರು ಹೇಳಿದ್ದನ್ನು ನಾನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಎಸ್. ಯೋಗೀಶ್ ಭಟ್ :- ಹೊಸ ಕಾಲೇಜುಗಳನ್ನು ಸ್ಯಾಂಕ್ಷನ್ ಮಾಡುವಾಗ ಅಕ್ಯಾಡೆಮಿಕ್ ವರ್ಷದ ಮುಂಚೆ ಅಂದರೆ ಜೂನ್ ಒಳಗಾಗಿ ಪ್ರಾರಂಭ ಮಾಡಿದರೆ ಅನುಕೂಲವಾಗುತ್ತದೆ. ಬೇರೆ ಎಲ್ಲಾ ಕಾಲೇಜ್‌ಗಳು ಪ್ರಾರಂಭವಾದಮೇಲೆ ಅದಕ್ಕೆ ಅನುಮತಿ ಕೊಟ್ಟರೆ ಜುಲೈ ಆಗಸ್ಟ್‌ನಲ್ಲಿ ಕೊಟ್ಟರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆ ಒಂದು ಸಮಸ್ಯೆಯನ್ನು ಹೇಗೆ ಪರಿಹರಿಸುತ್ತೀರಿ? ಎರಡನೆಯದು ಕೊರತೆ ಇರುವಂಥ ಅಧ್ಯಾಪಕರನ್ನು ತಕ್ಷಣ ಭರ್ತಿ ಮಾಡಿದರೆ ಒಳ್ಳೆಯದು. ಮತ್ತು ಆ ಕಾಲೇಜುಗಳಿಗೆ ಒಂದು ಶಕ್ತಿ ಬರುತ್ತದೆ. ಅವರು ಒಳ್ಳೆಯ ಪರ್ಫಾರ್ಮನ್ಸ್ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅನೇಕ ಕಡೆಗಳಲ್ಲಿ ಆರಂಭವಾಗಿ ಒಂದು ವರ್ಷವಾದರೂ ಕೂಡ ಶಿಕ್ಷಕರ ಕೊರತೆ ಇದ್ದದ್ದು ನಿಮ್ಮ ಗಮನಕ್ಕೆ ಬಂದಿದೆಯೇ? ಉದಾಹರಣೆಗೆ ಹೇಳುವುದಾದರೆ ರಥ ಬೀದಿಯಲ್ಲಿರುವಂಥ ವುಮನ್ಸ್ ಕಾಲೇಜ್ ಯಾವುದು ಇದೆ ಅಲ್ಲಿ ಇವೊತ್ತಿಗೂ ಕೂಡ ಹಿಂದಿ, ರಸಾಯನ ಮತ್ತು ಗಣಿತ ಶಾಸ್ತ್ರದ ಅಧ್ಯಾಪಕರನ್ನು ಕೊಡಲಿಕ್ಕೆ ಸಾಧ್ಯವಾಗಿಲ್ಲ. ಕಾವೂರ್‌ನಲ್ಲಿರುವ ಪದವಿ ಪೂರ್ವ ಕಾಲೇಜಿನಲ್ಲಿ ಫಿಜಿಕ್ಸ್, ಮ್ಯಾಥ್ಸ್, ಕೆಮಿಸ್ಟ್ರಿ ಅಧ್ಯಾಪಕರನ್ನು ಕೊಡಲಿಕ್ಕೆ ಸಾಧ್ಯವಾಗಿಲ್ಲ. ಹೀಗಾದರೆ ಯಾವ ರೀತಿಯಾಗಿ ಅವರಿಗೆ ಶಿಕ್ಷಣ ಕೊಡಬೇಕು? ಯಾವ ರೀತಿಯಾಗಿ ಒಳ್ಳೆಯ ರಿಸಲ್ಟನ್ನು ಅವರು ಪಡೆಯಬೇಕು? ಈ ಹಿನ್ನೆಲೆಯಲ್ಲಿ ತಾವೇನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಮಾನ್ಯ ಅಧ್ಯಕ್ಷರೇ, ಪ್ರೌಢ ಶಾಲೆಗಳು ಉಪಾಧ್ಯಾಯರನ್ನು ಹಾಗೂ ಪದವಿಪೂರ್ವ ಕಾಲೇಜಿನ ಉಪನ್ಯಾಸಕರನ್ನು ನೇಮಕ ಮಾಡತಕ್ಕಂಥ ಪ್ರಕ್ರಿಯೆ ಎರಡು ಮೂರು ವರ್ಷಗಳಿಂದ ಆಗಿಲ್ಲ. ಈ ವರ್ಷ ನಾವು 864 ಪದವಿ ಪೂರ್ವ ಕಾಲೇಜು ಉಪನ್ಯಾಸಕರನ್ನು ಮತ್ತು 2500 ಪ್ರೌಢಶಾಲೆ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಅವರೇನು ಹೇಳುತ್ತಿದ್ದಾರೆ. ಅದರ ಬಗ್ಗೆ ನನಗೆ ಅನುಭವ ಇದೆ. ಅನೇಕ ಕಡೆಗಳಲ್ಲಿ ಉಪಾಧ್ಯಾಯರುಗಳು ಇಲ್ಲದೆ ತುಂಬಾ ತೊಂದರೆಯಾಗಿರುವುದನ್ನು ಗಮನದಲ್ಲಿಟ್ಟುಕೊಂಡು ನಾವು ಕೂಡಲೇ ಉಪಾಧ್ಯಾಯರು ಗಳನ್ನು ನೇಮಕ ಮಾಡಿ ಎಲ್ಲೆಲ್ಲಿ ಕೊರತೆ ಇದೆ ಅಲ್ಲೆಲ್ಲಾ ತುಂಬತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಇನ್ನೊಂದು ಮಾತನ್ನು ಮಾನ್ಯ ಸ್ನೇಹಿತರು ಹೇಳಿದರು. ಅದರ ಬಗ್ಗೆ ಹೇಳಬೇಕಾದರೆ 200 ಹೈಸ್ಕೂಲ್‌ಗಳನ್ನು ಕೊಡುವಾಗ ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯವನ್ನು ನಾವು ಗಮನಕ್ಕೆ ತೆಗೆದುಕೊಂಡಿದ್ದೇವೆ. ಅದರಿಂದ ಅವರಿಗೆ ಅನುಕೂಲ ಆಗಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಚುನಾಯಿತ ಪ್ರತಿನಿಧಿಗಳು ಸ್ಥಳಗಳನ್ನು ಕೊಟ್ಟಾಗ ನಮ್ಮ ಅಧಿಕಾರಿಗಳಿಗೆ ಕೇಳಿ ನೋಡಿದಾಗ ಕೆಲವೊಂದು ವ್ಯತ್ಯಾಸ ವಾಗಿತ್ತು. ಆದಕಾರಣ ಸ್ವಲ್ಪ ತಡವಾಗಿದೆ. ನಮ್ಮಿಂದ ಏನೂ ತಡವಾಗಿಲ್ಲ. ನಮ್ಮದು ಕೂಡ ಜೂನ್ ಕೊನೆಯಲ್ಲಿ ಅಥವಾ ಜುಲೈ ಪ್ರಾರಂಭದಲ್ಲಿ ಮಾಡುವ ಆಸೆ ಇದೆ. ಮುಂದಿನ ವರ್ಷ ಈ ರೀತಿ ತಡವಾಗುವುದಿಲ್ಲ.

ಶ್ರೀ ಎಸ್. ಯೋಗೀಶ್ ಭಟ್ :- ಲ್ಯಾಬೊರಟೋರಿಗಳು ಯಾವುದು ಇವೆ ಅವುಗಳನ್ನು ಪೂರ್ಣ ಸಜ್ಜುಗೊಳಿಸಲು ತಾವು ಸಹಾಯ ಮಾಡುತ್ತೀರಾ? ಈಗ ಇರುವಂಥ ಎಲ್ಲಾ ಲ್ಯಾಬೋರಟೋರಿಗಳನ್ನು ಪೂರ್ಣ ಸಜ್ಜುಗೊಳಿಸಿ ಸುಸಜ್ಜಿತವಾಗಿ ತಾವು ಮಾಡುತ್ತೀರಾ?

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಪರಿಶೀಲನೆ ಮಾಡಿ ಪ್ರಯತ್ನ ಮಾಡುತ್ತೇನೆ.

ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್) :- ಮಾನ್ಯ ಅಧ್ಯಕ್ಷರೇ, ಕಾಲೇಜು ಗಳನ್ನು ಪ್ರಾರಂಭ ಮಾಡುವಾಗ ಮಾನದಂಡ ಯಾವುದನ್ನು ಉಪಯೋಗಿಸಿದರು? ಅದು ಅಲ್ಲದೆ ಗೋಕಾಕ್ ತಾಲ್ಲೂಕಿನ ನನ್ನ ಕ್ಷೇತ್ರದಲ್ಲಿ ಇರುವಂಥ ಕಾಲೇಜ್ ಒಂದೇ ಒಂದು. ಅದೂ ಕೂಡ ತಾಲ್ಲೂಕು ಕೇಂದ್ರದಲ್ಲಿದೆ. ಪ್ರೌಢಶಾಲೆಯಿಂದ ಇಲ್ಲಿಗೆ ಹೋಗಬೇಕಾದರೆ ಸುಮಾರು 35 ಕಿ.ಮೀ. ದೂರ ಆಗುತ್ತದೆ. ಈ 35 ಕಿ.ಮೀ. ಕೂಡ ಹೋಗುವುದಕ್ಕೆ ಬಸ್ ಎರಡು ಗಂಟೆಗೆ ಮಾತ್ರ ಹೋಗುತ್ತದೆ. ಆದ್ದರಿಂದ ನಾನು ಒಂದೇ ಒಂದು ಕಾಲೇಜನ್ನು ಕೇಳಿದ್ದೇವೆ ಆದರೂ ಸಹ ಗೋಕಾಕಕ್ಕೆ ನನ್ನ ಕ್ಷೇತ್ರಕ್ಕೆ ಒಂದು ಕಾಲೇಜ್ ಮಂಜೂರು ಆಗಲಿಲ್ಲ. ಇರುವ ಒಂದೇ ಒಂದು ಕಾಲೇಜಿಗೆ ಹೋಗಬೇಕು ಅಥವಾ ಸ್ಕೂಲ್ ಬಿಡಬೇಕು. ಈ ರೀತಿಯಾದರೆ ಮೆರಿಟ್‌ನಲ್ಲಿ ಆಯ್ಕೆ ಯಾಗುವಂಥ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆ ಹಾಗೂ ಅನಾನುಕೂಲವಾಗುತ್ತಿದೆ ಆದಕಾರಣ ಎಲ್ಲಿ ಕಾಲೇಜ್ ಇಲ್ಲವೋ ಎಲ್ಲಿ ಆವಶ್ಯಕತೆ ಇದೆಯೋ ಅಥವಾ

ಗುಡ್ಡಗಾಡು ಪ್ರದೇಶಗಳು ಎಲ್ಲಿ ಇವೆಯೋ ಅಲ್ಲಿ ಜನಸಂಖ್ಯೆಯ ಆಧಾರವನ್ನು ಕಡಿಮೆ ಇಟ್ಟುಕೊಂಡು ಹೋಗಿ ಬರಲು ಅನುಕೂಲವಾಗುವ ಹಾಗೆ ಈ ಕಾಲೇಜುಗಳನ್ನು ಪ್ರಾರಂಭ ಮಾಡಲು ಅನುವು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಮಾನ್ಯ ಅಧ್ಯಕ್ಷರೇ, ನಾವು ಜನಗಳ ಆಧಾರದ ಮೇಲೆ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡುವುದಕ್ಕೆ ಆಗುವುದಿಲ್ಲ. ಈ ಪದವಿ ಪೂರ್ವ ಕಾಲೇಜನ್ನು ಕೊಡಬೇಕಾದರೆ ಫೀಡಿಂಗ್ ಸ್ಕೂಲಾದ ಹೈಸ್ಕೂಲ್‌ಗಳು ಇರಲೇಬೇಕಾಗುತ್ತದೆ. ಏಕೆಂದರೆ ಈ ಹೈಸ್ಕೂಲ್‌ಗಳು ಇಲ್ಲದಿದ್ದರೆ ಪದವಿ ಪೂರ್ವ ಕಾಲೇಜು ನಡೆಯುವುದಕ್ಕೆ ತುಂಬಾ ಕಷ್ಟವಾಗುತ್ತದೆಯಲ್ಲದೇ ಇದಕ್ಕಾಗಿ ಹೆಚ್ಚಿನ ಖರ್ಚು ಕೂಡ ಆಗುತ್ತದೆ. ಈಗಾಗಲೇ ಮಾನ್ಯ ಸ್ನೇಹಿತರು ಏನು ಹೇಳಿದ್ದಾರೆ ಆ ಪ್ರದೇಶದ ಬಗ್ಗೆ ನಿರ್ದಿಷ್ಟವಾಗಿ ನನಗೆ ಕಳುಹಿಸಿಕೊಟ್ಟರೆ ಅದನ್ನು ಪರಿಶೀಲಿಸಿ ಬರುವ ವರ್ಷ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ 200 ಪ್ರೌಢ ಶಾಲೆಗಳನ್ನು ಮತ್ತು 50 ಪದವಿ ಪೂರ್ವ ಕಾಲೇಜುಗಳನ್ನು ತೆರೆದಿದ್ದೇವೆಂದು ತಿಳಿಸಿದ್ದಾರೆ; ತುಂಬಾ ಸಂತೋಷ. ಆದರೆ ಈ ಶಾಲೆಗಳಿಗೆ ಅಧ್ಯಾಪಕರನ್ನು ಪಕ್ಕದ ಶಾಲೆಯಿಂದ ಡೆಪ್ಯುಟೇಶನ್ ಮಾಡಿಕೊಂಡಿದ್ದೀರಿ. ಇದರಿಂದ ಈ ಪಕ್ಕದ ಶಾಲೆಗಳ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಗೆ ಒಳಗಾಗಿದ್ದಾರೆ. ಆದಕಾರಣ ಈ ರೀತಿ ನೀವು ಮಾಡದೇ ಏನು ಹೊಸದಾಗಿ ಪ್ರೌಢಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದೀರಿ ಇವುಗಳಿಗೆ ಖಾಯಂ ಆಗಿ ಅಧ್ಯಾಪಕರುಗಳನ್ನು ಯಾವ ದಿನಾಂಕದೊಳಗೆ ಭರ್ತಿ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು. ಏಕೆಂದರೆ ಕೇವಲ ಶಾಲೆಯನ್ನು ಕೊಟ್ಟು ಅಧ್ಯಾಪಕರುಗಳನ್ನು ಕೊಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಇದು ನನ್ನ ಮೊದಲನೆ ಪ್ರಶ್ನೆ. ಎರಡನೆಯ ಪ್ರಶ್ನೆ ಜೂನಿಯರ್ ಕಾಲೇಜುಗಳಲ್ಲಿ ಯಾರ ಅಧ್ಯಕ್ಷತೆಯಲ್ಲಿ ಸಂದರ್ಶಕ ಸಮಿತಿಯನ್ನು ಮಾಡುತ್ತೀರಿ ಮತ್ತು ಇದನ್ನು ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಅಧ್ಯಕ್ಷರು :- ಅರಗ ಜ್ಞಾನೇಂದ್ರ ಅವರೇ, ಈಗ ಮಂತ್ರಿಗಳು ಉತ್ತರ ಹೇಳುವುದಿರಲಿ, ಈಗ ಒಂದು ಘಳಿಗೆ ಕೆಳಗಡೆ ನಾವು ಪ್ರಶ್ನೆ ಕೇಳಿದಾಗ ಖಾಲಿ ಇರತಕ್ಕಂಥ ಉಪನ್ಯಾಸಕರ ಮತ್ತು ಮೇಸ್ಟ್ರುಗಳ ಹುದ್ದೆಯನ್ನು ಯಾವಾಗ ತುಂಬುತ್ತೀರಿ ಎಂದಾಗ ಅವರು ಉತ್ತರಿಸಿ ಎರಡ್ಮೂರು ವರ್ಷದಿಂದ ತುಂಬಿರಲಿಲ್ಲ, ನಾವು ಇದರ ಬಗ್ಗೆ ಪ್ರಯತ್ನವನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಇದಾದ ನಂತರ ಮತ್ತೊಂದು ಪ್ರಶ್ನೆ ಹಾಕಿ ಹೊಸದಾಗಿ ಎಷ್ಟು ಜೂನಿಯರ್ ಕಾಲೇಜುಗಳನ್ನು ಮತ್ತು ಎಷ್ಟು ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುತ್ತೀರಿ ಎಂದಾಗ ಅವರು ಉತ್ತರಿಸಿ ಇಷ್ಟು ಕಾಲೇಜು ಮತ್ತು ಪ್ರೌಢ ಶಾಲೆಗಳನ್ನು ಮಾಡುತ್ತೇವೆ ಎಂದು ಹೇಳಿದ್ದರು. ಆದುದರಿಂದ ಅವರು ಹೊಸ ಕಾಲೇಜುಗಳನ್ನೂ ಮತ್ತು ಪ್ರೌಢಶಾಲೆಗಳನ್ನೂ ತೆರೆಯಬೇಕು, ಖಾಲಿ

ಇರುವ ಹುದ್ದೆಗಳನ್ನು ತುಂಬಬೇಕಾದರೆ ಎಲ್ಲಾ ಪ್ರಯತ್ನಗಳನ್ನೂ ಅವರು ಈಗಾಗಲೇ ಮಾಡುತ್ತಿದ್ದಾರೆ. ಅದೇ ಪ್ರಶ್ನೆಯನ್ನು ನಾವು ರಿಪೀಟ್ ಮಾಡುವುದರಿಂದ, ಸರ್ಕಾರ ಎಂದರೆ after all we are all collectively running the State. It is not just Govindegowda. All of us are collectively running the Government. You must understand the magnitude of the problem.

ಶ್ರೀ ಅರಗ ಜ್ಞಾನೇಂದ್ರ :– ಟೀಚರ್ಸ್ ಶಾರ್ಟೇಜ್ ಇದ್ದ ಕಡೆಯಲ್ಲಾದರೂ .....

ಅಧ್ಯಕ್ಷರು :– ಎಲ್ಲಾ ಕಡೆ ಟೀಚರ್ಸ್ ಶಾರ್ಟೇಜ್ ಇದೆ. ಎಲ್ಲಾ ಕಡೆಯಲ್ಲಿಯೂ ಈ ಯೂನಿಫಾರಂ ಪ್ರಾಬ್ಲಮ್ ಇದೆ. ಈಗ ನೋಡಿ ಚಂದ್ರಶೇಖರ್ ನಾಯಕ್‌ರವರು ಹೇಳುತ್ತಾ ಟ್ರೈಬಲ್ ಏರಿಯಾದಲ್ಲಿ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ; ಆದ್ದರಿಂದ ನಾರ್ಮೆಲ್ ಕಂಡೀಶನ್ಸ್ ನೀವು ಏನು ಹಾಕಿದ್ದೀರಿ ಅದನ್ನು ಎಕ್ಸೆಪ್ಟ್ ಮಾಡಿ ಟ್ರೈಬಲ್ ಏರಿಯಾದಲ್ಲಿ ಹೆಚ್ಚು ಶಾಲೆಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡಿ ಎಂದರು. ಈ ರಾಜ್ಯದಲ್ಲಿ ಅನೇಕ ವರ್ಗದ ಜನರ ಮತ್ತು ಅನೇಕ ಪ್ರಾಂತ್ಯದ ಜನರ ಸಮಸ್ಯೆಗಳು ಇವೆ. ಇದನ್ನು ಬಗೆಹರಿಸುವುದಕ್ಕೆ ಅವರು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ. Let us not try to grill him. ಅವರಿಗೆ ಸದನದ ಪರವಾಗಿ ನಾವೆಲ್ಲರೂ ಸೇರಿ ಒಂದು ಸಲಹೆಯನ್ನು ಕೊಟ್ಟುಬಿಡೋಣ. ಏನೆಂದರೆ ಮಂತ್ರಿಗಳು ಹೊಸ ಪದವಿ ಪೂರ್ವ ಕಾಲೇಜುಗಳನ್ನು ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುವ ನಿಟ್ಟಿನಲ್ಲಿ ಹೊಸ ಹೆಜ್ಜೆಯನ್ನು ಏನು ಪ್ರಾರಂಭ ಮಾಡಿದ್ದಾರೆ ಇದರ ಬಗ್ಗೆ ನಮ್ಮೆಲ್ಲರ ಅಭಿನಂದನೆಗಳು. ದಯಮಾಡಿ ಇವುಗಳ ಮೇಲೆ ಮತ್ತೆ ಇಲ್ಲಿ ಪ್ರಶ್ನೆ ಬರದಂತೆ ಮಾಡಲು ತಾವು ಆದಷ್ಟು ಬೇಗ ಉಪನ್ಯಾಸಕರ ಮತ್ತು ಅಧ್ಯಾಪಕರುಗಳ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಎಲ್ಲಾ ಸದಸ್ಯರ ಪರವಾಗಿ ನಾನೇ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ :– ಧನ್ಯವಾದಗಳು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ :– ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಪ್ರಶ್ನೆಗೆ ಉತ್ತರಿಸುತ್ತಾ ಚುನಾಯಿತ ಪ್ರತಿನಿಧಿಗಳನ್ನು ಕೇಳಿ ನಾವು ಪದವಿ ಪೂರ್ವ ಕಾಲೇಜುಗಳನ್ನು ಮತ್ತು ಪ್ರೌಢಶಾಲೆಗಳನ್ನೂ ಕೊಡುತ್ತೇವೆ ಎಂದಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಈಗ ಒಂದು ಪದವಿ ಪೂರ್ವ ಕಾಲೇಜು ಪ್ರಾರಂಭ ಆಗಿದೆ. ಆದರೆ ಇದರ ಬಗ್ಗೆ ನನಗೆ ಮೊದಲು ವಿಷಯವೇ ಗೊತ್ತಿರಲಿಲ್ಲ. ಈ ರೀತಿಯಲ್ಲಿ ನಮಗೆ ತಿಳಿಸದೆಯೇ ಕಾಲೇಜನ್ನು ತೆರೆಯುತ್ತಿದ್ದಾರೆ, ಇದನ್ನು ಶಾಸಕರಿಗೆ ತಿಳಿಸಬೇಕು. ಇದಲ್ಲದೇ ಶಾಸಕರು ಯಾವುದನ್ನು ಸಲಹೆ ಮಾಡುತ್ತರೋ ಅದಕ್ಕೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ತಮ್ಮ ಮೂಲಕ ಮಂತ್ರಿಗಳಿಗೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು :– ಇದು ಒಂದು ಒಳ್ಳೆಯ ಸಲಹೆ. ಇದನ್ನು ಮಾಡಬೇಕಾದ ಅಗತ್ಯತೆ ಇದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಶಾಸಕರನ್ನೂ ಕೇಳುತ್ತೇವೆ. ಕೆಲವು ಸಂದರ್ಭಗಳಲ್ಲಿ ಶಾಸಕರು ಹೇಳಿದ್ದರಲ್ಲಿ ವ್ಯತ್ಯಾಸಗಳೇನಾದರೂ ಇದ್ದರೆ ಆಗ ನಾವು ಅಧಿಕಾರಿಗಳನ್ನು ಕರೆದು ಏನಾದರೂ ಕನಿಷ್ಟ ದೂರದ ವಿಚಾರದಲ್ಲಿ ಸರಿ ಇಲ್ಲದಿದ್ದರೆ ಅದನ್ನು ಬದಲಾವಣೆ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ದಯವಿಟ್ಟು ಇದರಲ್ಲಿ ಯಾರೂ ತಪ್ಪು ತಿಳಿಯಬಾರದು. ಈ ವ್ಯವಸ್ಥೆಯನ್ನು ಆಡಳಿತ ನಡೆಸತಕ್ಕಂಥವರು ಮಾಡಲೇಬೇಕಾಗುತ್ತದೆ. ನಿಮ್ಮ ಪ್ರಾತಿನಿಧ್ಯವನ್ನು ಕೇಳದೇ ನಾವು ಮಾಡತಕ್ಕಂಥದ್ದು ಸರಿಯಾದುದಲ್ಲ, ನಿಮ್ಮನ್ನು ಕೇಳಿಯೇ ಮಾಡುತ್ತಿರುವುದು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ :- ಸೂರ್ಲಿಬೆಲೆಯಲ್ಲಿ ಒಂದು ಹೈಸ್ಕೂಲ್ ಕಟ್ಟಡ ಆಗಬೇಕಾಗಿದೆ. ಇದನ್ನು ತೆರೆಯಬಹುದೆಂದು ಅಧಿಕಾರಿಗಳು ರೆಕಮೆಂಡ್ ಕೂಡ ಮಾಡಿದ್ದಾರೆ. ಇದರ ಬಗ್ಗೆ ಎರಡು ಬಾರಿ ಪ್ರಶ್ನೆ ಕೇಳಿದ್ದರೂ ಇದಕ್ಕೆ ಉತ್ತರ ಬರಲಿಲ್ಲ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಮಾನ್ಯ ಸ್ನೇಹಿತರು ಏನು ಕೇಳಿದ್ದಾರೆ ಅದರಲ್ಲಿ ಹೈಸ್ಕೂಲ್‌ಗಳನ್ನು ಸಾಮಾನ್ಯವಾಗಿ ಎಲ್ಲಿ ಕೇಳಿರುತ್ತಾರೋ ಅಲ್ಲಿಯೇ ಕೊಟ್ಟಿರುವ ಉದಾಹರಣೆಗಳು ಇವೆ. ಅದನ್ನೂ ಕೂಡ ತಾವು ನೋಡಿ ಹೇಳಬೇಕು. ಆಮೇಲೆ ಪದವಿ ಪೂರ್ವ ಕಾಲೇಜುಗಳ ಅವಶ್ಯಕತೆ ಎಲ್ಲಿದೆ ಎಂಬುದನ್ನು ನೋಡಿ ನಾವು ಕೊಟ್ಟಿರುವುದು. ಸದಸ್ಯರನ್ನು ಕೇಳಲಿಲ್ಲ ಎಂದು ಅವರು ಹೇಳುತ್ತಿದ್ದಾರೆ, ಆದರೆ ನಾವು ಅನೇಕ ಜನರನ್ನು ಕೇಳಿಯೇ ಇದನ್ನು ತೀರ್ಮಾನ ಮಾಡಿರತಕ್ಕಂಥದ್ದು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ :- ನಾನು ಎರಡ್ಮೂರು ಬಾರಿ ಪ್ರಶ್ನೆಯನ್ನು ಕಳುಹಿಸಿದ್ದೇನೆಯಾದರೂ ಅದಕ್ಕೆ ಉತ್ತರವೇ ಬರಲಿಲ್ಲ. ಸೂರ್ಲಬೆಲೆಯಲ್ಲಿ ಕಟ್ಟಡ ಆಗಬೇಕೆಂದು ಹೇಳಿ ಅಧಿಕಾರಿಗಳು ಕೂಡ ಸರ್ಕಾರೀ ಜಾಗ ಇದೆ ಎಂದು ತಿಳಿಸಿ ರೆಕಮೆಂಡ್ ಮಾಡಿದ್ದಾರೆ. ಇದರ ಬಗ್ಗೆ ಫೈಲ್ ಸನ್ಮಾನ್ಯ ಮಂತ್ರಿಗಳು ಬಳಿಯಲ್ಲಿ ಸುಮಾರು ಒಂದು ವರ್ಷದಿಂದ ಇದೆ. ಯಾವುದೋ ಒಂದು ರಾಜಕೀಯ ಉದ್ದೇಶದಿಂದ ಅದನ್ನು ತಡೆ ಹಿಡಿದ್ದಾರೆ.

ಅಧ್ಯಕ್ಷರು :- ರಾಜಕೀಯವನ್ನು ಗೋವಿಂದೇಗೌಡರು ಮಾಡುವುದಿಲ್ಲ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ :- ಮಾಡಿದ್ದಾರೆ ಅಧ್ಯಕ್ಷರೇ, ನಾನು ಪರ್ಸನಲ್ ಆಗಿ ಅವರ ಹತ್ತಿರ ಮಾತನಾಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೋವಿಂದೇಗೌಡರು ಉತ್ತರ ಕೊಡುತ್ತಾ ಒಂದು ಮಾತನ್ನು ಹೇಳಿದರು, ಯಾರೋ ಒಬ್ಬ ಶಾಸಕ ಒಂದು ಸಲಹೆಯನ್ನು ಕೊಡುತ್ತಾನೆ, ಆದರೆ ನಿಮ್ಮ ಅಧಿಕಾರಿಗಳಿಗೆ ಈ ಸಲಹೆ ಸರಿ ಕಾಣಿಸದೇ ಮತ್ತು ನಿಮಗೂ ಸರಿ ಕಾಣಿಸದಿದ್ದಾಗ ನೀವು ಆ ಶಾಸಕರಿಗೆ ಬೇರೆ ಕಡೆ ಸಲಹೆ ಮಾಡಿ ಎಂದು ಹೇಳಬಹುದು. ಆದರೆ ಅಪ್ಪಚ್ಚು ರಂಜನ್

ಕೇಸ್‌ನಲ್ಲಿ ಸುಮಾರು ಹತ್ತು ಉದಾಹರಣೆಗಳನ್ನು ನಾನು ಕೊಡುತ್ತೇನೆ. ಉದ್ದೇಶ ಪೂರ್ವಕವಾಗಿ ಒಂದು ಕೊಡುಗು ಜಿಲ್ಲೆಯಲ್ಲಿ ನಮ್ಮ ಶಾಸಕರು ಹೇಳಿದಂಥ ಯಾವುದೇ ಕೆಲಸ ಆಗದಂತೆ ಬೇರೆಯವರು ಪ್ರವೇಶ ಮಾಡುವಂಥದ್ದು ಮತ್ತು ಬೇರೆಯವರು ಹೇಳುವಂಥದ್ದನ್ನು ಮಾಡಿಕೊಡುವಂಥ ಸುಮಾರು ಹತ್ತು ಉದಾಹರಣೆಗಳ ಬಗ್ಗೆ ನಿನ್ನೆ ನಮ್ಮ ಶಾಸಕಾಂಗ ಪಕ್ಷದಲ್ಲಿ ಒಂದೂವರೆ ಗಂಟೆ ಕಾಲ ಚರ್ಚೆಯಾಯಿತು. ಅಂಥ ಹತ್ತು ಉದಾಹರಣೆಗಳನ್ನು ನಾನು ತಮಗೆ ಕೊಡಬಲ್ಲೆ. ಆದುದರಿಂದ ಈ ರೀತಿಯಲ್ಲಿ ಬೇರೆಯವರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಇವರಲ್ಲಿ ಮಾಜಿ ಮಂತ್ರಿ ಇರಬಹುದು, ಮಾಜಿ ಶಾಸಕ ಇರಬಹುದು. ಆದರೆ ಈಗ ಹಾಲಿ ಇರುವ ಶಾಸಕರಿಗೆ ಸ್ವಲ್ಪ ಆದ್ಯತೆ ಸಿಗಬೇಕಲ್ಲ. ಆದ್ಯತೆ ಈಗ ಸಿಗದೇ ಇರುವ ಮೂರ್ನಾಲ್ಕು ಉದಾಹರಣೆಗಳನ್ನು ನಾನು ನಿಮಗೆ ಕೊಡುತ್ತೇನೆ. ಅಪ್ಪಚ್ಚುರಂಜನ್ ಕೇಸ್‌ನಲ್ಲಿ ಆ ರೀತಿಯ ಅನ್ಯಾಯವಾಗಿದೆ. ಆದಕ್ಕೋಸ್ಕರ ನಾನು ನಿಮಗೆ ಹೇಳಿದ್ದುದು.

ಅಧ್ಯಕ್ಷರು :- ಗೋವಿಂದೇಗೌಡರೇ, ಆರೀತಿ ಆಗದೇ ಇರುವ ಹಾಗೆ ನೋಡಿ ಕೊಂಡು ವ್ಯವಸ್ಥೆಯನ್ನು ಮಾಡಿ. ಈ ರೀತಿಯಾಗುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಮಾನ್ಯ ಇನಾಂದಾರರ ಕ್ಷೇತ್ರದಲ್ಲೂ ಕೂಡ ಇದೇ ರೀತಿಯಾಗಿದ್ದರ ಬಗ್ಗೆ ಸದನದಲ್ಲಿ ಪ್ರಸ್ತಾಪವಾಗಿತ್ತು. ಇದರ ನಂತರ ನಮ್ಮ ಶ್ರೀರಂಗದೇವರಾಯರವರ ಕ್ಷೇತ್ರದಲ್ಲೂ ಇದೇ ರೀತಿಯಾಯಿತು. ಅಂದರೆ ತಾವು ಹೈಸ್ಕೂಲ್ ಸ್ಯಾಂಕ್ಷನ್ ಮಾಡಿದಿರಿ ಮತ್ತು ಅಲ್ಲಿ ಸುಮಾರು ಹತ್ತು-ಹದಿನೈದು ದಿವಸ ತರಗತಿಗಳು ನಡೆದ ಮೇಲೆ ಪುನಃ ಅದನ್ನು ಬೇರೆ ಕಡೆಗೆ ಶಿಫ್ಟ್ ಮಾಡಿದಿರಿ. ಈ ರೀತಿಯ ಒಂದೇ ಕೇಸ್ ಅಲ್ಲ. ಸುಮಾರು ಮೂರ್ನಾಲ್ಕು ಕೇಸ್‌ಗಳಿವೆ. ಆದರಲ್ಲೂ ವಿರೋಧ ಪಕ್ಷದಲ್ಲಿರುವ ಸದಸ್ಯರ ಕ್ಷೇತ್ರದೊಳಗೆ ಮಾತ್ರ ತಾವು ಶಿಫ್ಟ್ ಮಾಡಿದ್ದೀರಿ. ಈ ರೀತಿಯ ನಾಲ್ಕೈದು ಕೇಸ್‌ಗಳ ಉದಾಹರಣೆಯನ್ನು ನಾನು ಬೇಕಾದರೆ ನಿಮಗೆ ಒದಗಿಸಿಕೊಡುತ್ತೇನೆ. ಈ ಸದನದಲ್ಲಿ ಪ್ರಸ್ತಾಪವಾಯಿತು, ಆಗ ತಾವೇ ಹೇಳಿದಿರಿ, ನನ್ನ ಛೇಂಬರಿಗೆ ಬನ್ನಿ ನಾನು ಇದನ್ನು 3 ಗಂಟೆಗೆ ಸರಿಪಡಿಸುತ್ತೇನೆ ಎಂದು ಇನಾಂದಾರರಿಗೆ, ಶ್ರೀರಂಗದೇವರಾಯರವರಿಗೆ ಮತ್ತು ಇನ್ನೊಬ್ಬ ಸದಸ್ಯರಿಗೂ ಹೇಳಿದಿರಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಇನಾಂದಾರ್ ಆಗಲೀ, ಶ್ರೀರಂಗ ದೇವರಾಗಲೀ ಅಥವಾ ಬೇರೆಯವರೇ ಸದಸ್ಯರಾಗಲೀ ದಯವಿಟ್ಟು ಶಾಲೆ ಮಂಜೂ ರಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಕೇಳಿ. ತೊಂದರೆಯಾಗಿದೆ ಎಂದು ನನಗೆ ಗೊತ್ತಾದಾಗ ಅಟೆಂಡ್ ಮಾಡಬೇಕಾಗಿರುವುದು ನನ್ನ ಡ್ಯೂಟಿ. ಅದನ್ನು ನಾನು ಮಾಡಿದ್ದೇನೆ. ಅದನ್ನು ಮಾಡಿರುವುದನ್ನು ತಾವು ಹೇಳಬೇಡವೇ? ಈ ಎರಡು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಇದನ್ನು ನನ್ನ ಅವಗಾಹನೆಗೆ ತಂದಮೇಲೆ ಅಲ್ಲಿ ಸರಿಯಾಗಿದೆಯೋ ಇಲ್ಲವೋ ಎಂಬುದನ್ನಾದರೂ ಅವರು ಹೇಳಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಸರಿಯಾಗಿಲ್ಲ ಎಂದು ಸದನದಲ್ಲೇ ಹೇಳಲಾಯಿತಲ್ಲಾ. ಆಗ ಮಾನ್ಯ ಅಧ್ಯಕ್ಷರೇ ಮಧ್ಯೆ ಪ್ರವೇಶ ಮಾಡಿ ಕರೆದು ಅದನ್ನು ಹೇಳಿದರು, ಆ ರೀತಿ ಆಗಬೇಕಾದ ಅವಶ್ಯಕತೆ ಏನಿತ್ತು ಎಂದು ಕೇಳಿದರಲ್ಲಾ.

ಶ್ರೀ ಹೆಚ್. ಜಿ. ಗೋವಿಂದೇ ಗೌಡ :- ಒಂದೊಂದು ಬಾರಿ ಆ ರೀತಿಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಒಂದೊಂದು ಸಾರಿ ಎಂದರೆ ಯಾವಾಗಲೂ ಇವರದ್ದೇ ಈ ರೀತಿ ಆಗುತ್ತದೆಯೇ? ಆ ಕಡೆಯಲ್ಲಿ ಕುಳಿತವರದ್ದು ಈ ರೀತಿ ಎಷ್ಟು ಆಗಿದೆ ಹೇಳಿ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ :- ಹಾಗೇನಿಲ್ಲ, ಪ್ರತಿಯೊಬ್ಬ ಶಾಸಕರು ಎಲ್ಲೆಲ್ಲಿ, ಏನೇನು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇಲ್ಲಿ ಆಪ್ಪಚ್ಚುದು ಆಯಿತು, ಅಲ್ಲಿ ಅವರದ್ದು ಆಯಿತು, ಹೀಗೆ ಬೇರೆಯವರದ್ದು ಎಷ್ಟು ಮಂದಿಯದ್ದು ಹೀಗೆ ಆಗಿದೆ ಹೇಳಿ.

(ಗೊಂದಲ)

ಅಧ್ಯಕ್ಷರು :- ನಾರಾಯಣ್‌ರವರೇ ನಿಮ್ಮದೇನೂ ಹೇಳಿ.

ಶ್ರೀ ಆರ್. ನಾರಾಯಣ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು 200 ಹೊಸ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿರುವುದು ಸಂತೋಷಕರ ಸಂಗತಿ. ಇವುಗಳಲ್ಲಿ ಹೆಣ್ಣುಮಕ್ಕಳ ಪ್ರೌಢ ಶಾಲೆಗಳನ್ನು ಎಷ್ಟು ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ನಮಗೆ ಕೊಡಬೇಕು. ಏಕೆಂದರೆ ಇಂದಿನ ದಿನಗಳಲ್ಲಿ ಹೆಣ್ಣುಮಕ್ಕಳೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರಿದ್ದಾರೆ. ನಮ್ಮ ಬೆಳ್ಳಾವಿ ಕ್ಷೇತ್ರದಲ್ಲಿ ಹೆಣ್ಣುಮಕ್ಕಳ ಪ್ರೌಢಶಾಲೆಗಾಗಿ ಕಳೆದ ಐದು ವರ್ಷಗಳಿಂದ ಕೇಳುತ್ತಿದ್ದೇನೆ. ಇವೊತ್ತು ಓದುವ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿಯಾಗಿರುವುದರಿಂದ ಹೆಣ್ಣುಮಕ್ಕಳ ಪ್ರೌಢ ಶಾಲೆ ಅವಶ್ಯಕವಿದೆ.

ಅಧ್ಯಕ್ಷರು :- ನಾರಾಯಣ್ ನೀವು ಇನ್ನೂ ಬ್ಯಾಚುಲರ್ ಆಗಿಯೇ ಇದ್ದೀರಲ್ಲವೇ?

ಶ್ರೀ ಆರ್. ನಾರಾಯಣ್ :- ಹೌದೌದು. ಅಷ್ಟರಮಟ್ಟಿಗೆ ತಮಗೆ ಜ್ಞಾಪಕವಿದೆಯಲ್ಲ, ಥ್ಯಾಂಕ್ ಯು ವೆರಿ ಮಚ್.

(ನಗು)

ಅಧ್ಯಕ್ಷರು :- ಬ್ಯಾಚುಲರ್‌ರವರಾದ ನಾರಾಯಣ್‌ರವರು ತಮ್ಮನ್ನು ಪ್ರಶ್ನೆ ಕೇಳಿದ್ದಾರೆ A bachelor asking about the Girl's school;

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಅವರ ಕ್ಷೇತ್ರಕ್ಕೂ ಒಂದು ಪ್ರೌಢಶಾಲೆ ಮಂಜೂರಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನಾನು ವಿಚಾರಿಸಿಕೊಳ್ಳುತ್ತೇನೆ. ಬಹುಶಃ ಮಾನ್ಯ ಸದಸ್ಯರು ಮೊದಲೇ ಹೆಣ್ಣುಮಕ್ಕಳ ಪ್ರೌಢ

ಶಾಲೆಯೇ ಬೇಕು ಎಂದು ಕೇಳಿದಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಆದರೂ ಈಗಲೂ ಚಿಂತೆಯಿಲ್ಲ, ಪರಿಶೀಲನೆ ಮಾಡಿ ನೋಡೋಣ. ಈಗಾಗಲೇ ಮಾನ್ಯ ಸದಸ್ಯರಾರೋ ಪದವಿ ಪೂರ್ವ ಕಾಲೇಜುಗಳಲ್ಲಿ ಬೆಟರ್‌ಮೆಂಟ್ ಕಮಿಟಿಯನ್ನು ಯಾರ ಅಧ್ಯಕ್ಷತೆಯಲ್ಲಿ ಮಾಡತ್ತೀರಿ ಎಂದು ಕೇಳಿದರು. ಈಗಾಗಲೇ ಇದರ ಬಗ್ಗೆ ಆದೇಶ ಕಳುಹಿಸಿದ್ದು ಶಾಸಕರೇ ಕಮಿಟಿಯ ಅಧ್ಯಕ್ಷರಾಗಿರುತ್ತಾರೆ. ಇದನ್ನು ಪಕ್ಷಾತೀತವಾಗಿ ಮಾಡಿದ್ದು ಶಾಸಕರೇ ಕಮಿಟಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.

ವಿಷಯ :- 1995-96 ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಬಂದ ಆದಾಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 270 (1937)

ಶ್ರೀ ಪಿ. ಎಸ್. ಜೈವಂತ್ (ಸಿರ್ಸಿ) :- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1995-96 ನೇ ಸಾಲಿಗೆ ಉತ್ತರ ಕನ್ನಡ ಜಿಲ್ಲೆಯಿಂದ ಅರಣ್ಯ ಇಲಾಖೆಯ ಆದಾಯವೆಷ್ಟು? (ಪ್ರತಿ ಡಿವಿಜನರಲ್ಲಿ) 1) ಕಟ್ಟಿಗೆ ಮಾರಾಟ 2) ಜಲಾವು ಮಾರಾಟ 3) ಕೂಲಿಗಾರರ ಸಂಘಗಳಿಂದ 4) ಅರಣ್ಯ ಉತ್ಪನ್ನ ಮಾರಾಟದಿಂದ 5) ಇತರೆ ಆದಾಯದ ಬಗ್ಗೆ ವಿವರಗಳನ್ನು ಸರ್ಕಾರದವರು ನೀಡುವರೇ.

2. ಹಿಂದಿನ 5 ವರ್ಷಗಳ ಅರಣ್ಯ ಆದಾಯದ ವಿವರ ಹಾಗೂ ಖರ್ಚಿನ ವಿವರಗಳನ್ನು ಸರ್ಕಾರದವರು ನೀಡುವರೇ.

ಶ್ರೀ ಗುರುಪಾದಪ್ಪ ನಾಗಪೂರಪಲ್ಲಿ (ಅರಣ್ಯ ಸಚಿವರು) :-

1. ಉತ್ತರ ಕನ್ನಡ ಜಿಲ್ಲೆಯಲ್ಲಿ 1995-96 ನೇ ಸಾಲಿನಲ್ಲಿ ಕಟ್ಟಿಗೆ ಮಾರಾಟ, ಜಲಾವು ಮಾರಾಟ, ಕೂಲಿಗಾರರ ಸಂಘಗಳಿಂದ ಮಾರಾಟ, ಅರಣ್ಯ ಉತ್ಪನ್ನ ಮಾರಾಟ ಮತ್ತು ಇತರೆ ಮಾರಾಟದಿಂದ ಪ್ರತೀ ಡಿವಿಜನ್‌ನಲ್ಲಿ ಇಲಾಖೆಗೆ ಬಂದ ಆದಾಯದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

2. ಹಿಂದಿನ 5 ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಆದಾಯ ಮತ್ತು ಖರ್ಚಿನ ವಿವರಗಳು ಈ ಕೆಳಗಿನಂತಿವೆ :

ವರ್ಷ	ಒಟ್ಟು ಅರಣ್ಯ ಆದಾಯ ರೂ.	ಒಟ್ಟು ಖರ್ಚಿನ ವಿವರ ರೂ.
95-96	54,49,86,189-89	26,89,65,079-90
94-95	46,73,50,352-39	27,87,32,636-12
93-94	44,89,35,006-76	26,98,42,971-90
92-93	39,07,22,096-26	21,41,77,002-38
91-92	30,39,71,383-73	19,63,32,908-28